**A**

**CCE RF**
**CCE RR**
**REVISED**

**ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು – 560 003**

**KARNATAKA SECONDARY EDUCATION EXAMINATION BOARD, MALLESWARAM, BANGALORE – 560 003**

**ಎಸ್.ಎಸ್.ಎಲ್.ಸಿ. ಪರೀಕ್ಷೆ, ಮಾರ್ಚ್ / ಏಪ್ರಿಲ್, 2020**

**S.S.L.C. EXAMINATION, MARCH / APRIL, 2020**

**ಮಾದರಿ ಉತ್ತರಗಳು**

**MODEL ANSWERS**

ದಿನಾಂಕ : 09. 04. 2020 ] **ಸಂಕೇತ ಸಂಖ್ಯೆ : 85-K**

Date : 09. 04. 2020 ] **CODE NO. : 85-K**

# ವಿಷಯ : ಸಮಾಜ ವಿಜ್ಞಾನ

# Subject : SOCIAL SCIENCE

**(ಕನ್ನಡ ಭಾಷಾಂತರ / Kannada Version)**

**(ಹೊಸ ಪಠ್ಯಕ್ರಮ / New Syllabus)**

**(ಶಾಲಾ ಅಭ್ಯರ್ಥಿ & ಪುನರಾವರ್ತಿತ ಶಾಲಾ ಅಭ್ಯರ್ಥಿ / Regular Fresh & Regular Repeater)**

**[ ಗರಿಷ್ಠ ಅಂಕಗಳು : 80**

**[ Max. Marks : 80**

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| I. | **ಬಹು–ಆಯ್ಕೆ ಪ್ರಶ್ನೆ (ಕ್ರಮಾಕ್ಷರದೊಂದಿಗಿನ ಪ್ರತಿ ಸರಿಯುತ್ತರಕ್ಕೆ 1 ಅಂಕ) :** $8 \times 1 = 8$ | |
| 1. | 1453 ರಲ್ಲಿ ಕಾನ್‌ಸ್ಟ್ಯಾಂಟಿನೋಪಲ್ ನಗರವನ್ನು ವಶಪಡಿಸಿಕೊಂಡವರು<br>(A) ಅರಬ್ಬರು<br>(B) ಅಟೋಮನ್ ಟರ್ಕರು<br>(C) ಇಟಲಿಯನ್ನರು<br>(D) ಪೋರ್ಚುಗೀಸರು<br>***ಉತ್ತರ :*** (B) ಅಟೋಮನ್ ಟರ್ಕರು | 1 |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 2. | ಕ್ವಿಟ್ ಇಂಡಿಯಾ ಚಳುವಳಿಯು ಕಾಂಗ್ರೆಸ್ಸೇತರ ನಾಯಕರಿಗೆ ನಾಯಕತ್ವವನ್ನು ನೀಡಿತು. ಈ ಕೆಳಗಿನವರಲ್ಲಿ ಕಾಂಗ್ರೆಸ್ಸೇತರ ನಾಯಕರನ್ನು ಗುರುತಿಸಿ :<br>(A) ಕಸ್ತೂರ್‌ಬಾ ಗಾಂಧಿ<br>(B) ಡಾ. ಬಿ.ಆರ್. ಅಂಬೇಡ್ಕರ್<br>(C) ಜಯಪ್ರಕಾಶ್ ನಾರಾಯಣ್<br>(D) ಮೌಲಾನಾ ಅಬ್ದುಲ್ ಕಲಾಂ ಆಜಾದ್<br>***ಉತ್ತರ :*** (C) ಜಯಪ್ರಕಾಶ್ ನಾರಾಯಣ್ | 1 |
| 3. | ಪಂಚಶೀಲ ತತ್ವಗಳಿಗೆ ಚೀನಾದ ಪ್ರಧಾನಿ ಚೌ.ಎನ್. ಲಾಯ್ ಜೊತೆ ಒಪ್ಪಂದಕ್ಕ ಸಹಿ ಹಾಕಿದ ಭಾರತದ ಪ್ರಧಾನಿ<br>(A) ಜವಾಹರಲಾಲ್ ನೆಹರು<br>(B) ಲಾಲ್ ಬಹಾದ್ದೂರ್ ಶಾಸ್ತ್ರಿ<br>(C) ಇಂದಿರಾ ಗಾಂಧಿ<br>(D) ಅಟಲ್ ಬಿಹಾರಿ ವಾಜಪೇಯಿ<br>***ಉತ್ತರ :*** (A) ಜವಾಹರಲಾಲ್ ನೆಹರು | 1 |
| 4. | ಬಾಲಕಿಯರ ಸಬಲೀಕರಣಕ್ಕಾಗಿ "ಬಾಲಿಕಾ ಸಂಘ"ಗಳನ್ನು ಸ್ಥಾಪಿಸಿ, ನಿರ್ವಹಿಸಬೇಕಾದವರು<br>(A) ಮಕ್ಕಳ ಹಕ್ಕುಗಳ ರಕ್ಷಣಾ ಸಮಿತಿ<br>(B) ಮಕ್ಕಳ ಗ್ರಾಮ ಸಭೆ<br>(C) ಮಕ್ಕಳ ಸುರಕ್ಷತಾ ಸಮಿತಿ<br>(D) ಅಂಗನವಾಡಿಗಳು<br>***ಉತ್ತರ :*** (D) ಅಂಗನವಾಡಿಗಳು | 1 |
| 5. | ಕಾರ್ಗಿಲ್ ಸಮೀಪದ ಡ್ರಾಸ್‌ನಲ್ಲಿ ಅತೀ ಕಡಿಮೆ ಉಷ್ಣಾಂಶವು ದಾಖಲಾಗಿದೆ. ಏಕೆಂದರೆ ಇದು<br>(A) ಸೂರ್ಯನ ನೇರವಾದ ಕಿರಣಗಳನ್ನು ಪಡೆಯುತ್ತದೆ<br>(B) ಸಮುದ್ರಕ್ಕೆ ಹತ್ತಿರದಲ್ಲಿದೆ<br>(C) ಅತೀ ಎತ್ತರದ ಪ್ರದೇಶದಲ್ಲಿದೆ<br>(D) ನೈರುತ್ಯ ಮಾನ್ಸೂನ್ ಮಾರುತಗಳ ಪ್ರಭಾವಕ್ಕೆ ಒಳಪಟ್ಟಿದೆ<br>***ಉತ್ತರ :*** (C) ಅತೀ ಎತ್ತರದ ಪ್ರದೇಶದಲ್ಲಿದೆ | 1 |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 6. | ನಮ್ಮ ಸಂವಿಧಾನದ 21ನೇ ವಿಧಿಯು ತಿಳಿಸುವುದೇನೆಂದರೆ<br>(A) ಪರಿಶಿಷ್ಠ ಜಾತಿ/ಪಂಗಡಗಳ ಶೈಕ್ಷಣಿಕ ಆಸಕ್ತಿಗಳಿಗೆ ಬೆಂಬಲ ನೀಡುವುದು ಸರ್ಕಾರಗಳ ಜವಾಬ್ದಾರಿ<br>(B) ಅಲ್ಪ ಸಂಖ್ಯಾತರು ಶೈಕ್ಷಣಿಕ ಸಂಸ್ಥೆಗಳನ್ನು ಸ್ಥಾಪಿಸಲು ಅವಕಾಶ ನೀಡುವುದು<br>(C) ಸಾಮಾಜಿಕ ನ್ಯಾಯ ಮತ್ತು ಜನರ ಅಭಿವೃದ್ಧಿಗೆ ಅವಕಾಶಗಳನ್ನು ನೀಡುವುದು ರಾಜ್ಯ ಸರ್ಕಾರಗಳ ಕರ್ತವ್ಯ<br>(D) ಶಿಕ್ಷಣವು ಮಕ್ಕಳ ಮೂಲಭೂತ ಹಕ್ಕು ಎಂದು ಘೋಷಿಸುವುದು<br>***ಉತ್ತರ :*** (D) ಶಿಕ್ಷಣವು ಮಕ್ಕಳ ಮೂಲಭೂತ ಹಕ್ಕು ಎಂದು ಘೋಷಿಸುವುದು | 1 |
| 7. | ಈ ಕೆಳಗಿನವುಗಳಲ್ಲಿ ಸರ್ಕಾರದ ತೆರಿಗೆಯೇತರ ವರಮಾನ ಆಗಿರುವುದು<br>(A) ಸರಕು ಮತ್ತು ಸೇವಾ ತೆರಿಗೆ (ಜಿ.ಎಸ್.ಟಿ.)<br>(B) ವಿವಿಧ ರೀತಿಯ ದಂಡಗಳು<br>(C) ಆಮದು ರಫ್ತು ಸುಂಕ<br>(D) ಸ್ಟ್ಯಾಂಪ್ ಶುಲ್ಕ<br>***ಉತ್ತರ :*** (B) ವಿವಿಧ ರೀತಿಯ ದಂಡಗಳು | 1 |
| 8. | ‘ಬಿಳಿಕ್ರಾಂತಿಯ ಪಿತಾಮಹ’ ಎಂದು ಪ್ರಖ್ಯಾತರಾದ ಉದ್ಯಮಿ<br>(A) ಡಾ. ಪ್ರತಾಪ್ ರೆಡ್ಡಿ<br>(B) ನರೇಶ್ ಗೋಯಲ್<br>(C) ವರ್ಗೀಸ್ ಕುರಿಯನ್<br>(D) ಕಿರಣ್ ಮುಜಮ್‌ದಾರ್ ಷಾ<br>***ಉತ್ತರ :*** (C) ವರ್ಗೀಸ್ ಕುರಿಯನ್ | 1 |
| II. | **ಒಂದೊಂದು ವಾಕ್ಯದಲ್ಲಿ ಉತ್ತರಿಸುವುದು :** $8 \times 1 = 8$ | |
| 9. | ಬಂಗಾಳದಲ್ಲಿ ದ್ವಿಪ್ರಭುತ್ವವನ್ನು ಜಾರಿಗೆ ತಂದವನು ಯಾರು ?<br>***ಉತ್ತರ :***<br>ಬಂಗಾಳದಲ್ಲಿ ದ್ವಿಪ್ರಭುತ್ವವನ್ನು ಜಾರಿಗೆ ತಂದವರು ರಾಬರ್ಟ್ ಕ್ಲೈವ್. | 1 |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 10. | ರಾಜಾ ರಾಮ್‌ಮೋಹನ್ ರಾಯರ ಸತಿ ಪದ್ಧತಿ ವಿರೋಧಿ ಹೋರಾಟವನ್ನು ಗವರ್ನರ್ ಜನರಲ್ ವಿಲಿಯಂ ಬೆಂಟಿಂಕ್ ಹೇಗೆ ಬೆಂಬಲಿಸಿದನು ? | |
| | ***ಉತ್ತರ :*** | |
| | 1829 ರಲ್ಲಿ ಸತಿಪದ್ಧತಿಯನ್ನು ಕಾನೂನಾತ್ಮಕವಾಗಿ ನಿಷೇಧಿಸಲಾಯಿತು. | 1 |
| 11. | ಮಾನವ ಹಕ್ಕುಗಳ ದಿನವನ್ನು ಎಂದು ಆಚರಿಸುವರು ? | |
| | ***ಉತ್ತರ :*** | |
| | ಮಾನವ ಹಕ್ಕುಗಳ ದಿನವನ್ನು ಡಿಸೆಂಬರ್ 10 ರಂದು ಆಚರಿಸುವರು. | 1 |
| 12. | ಹೆಣ್ಣು ಭ್ರೂಣ ಹತ್ಯೆ ಎಂದರೇನು ? | |
| | ***ಉತ್ತರ :*** | |
| | ಹೆಣ್ಣು ಭ್ರೂಣವನ್ನು ಬೆಳೆಯದಂತೆ ತಡೆಯುವುದು ಅಥವಾ ಕಾನೂನನ್ನು ಕಡೆಗಣಿಸಿ ಉದ್ದೇಶ ಪೂರ್ವಕ – ಗರ್ಭಪಾತ. | 1 |
| 13. | ಉಷ್ಣ ವಲಯದ ಎಲೆ ಉದುರಿಸುವ ಕಾಡುಗಳನ್ನು 'ಮಾನ್ಸೂನ್ ಕಾಡುಗಳು' ಎಂದು ಕರೆಯುವರು. ಏಕೆ ? | |
| | ***ಉತರ :*** | |
| | ವಸಂತ ಋತು ಅಥವಾ ಬೇಸಿಗೆಯ ಆರಂಭದಲ್ಲಿ ಎಲೆ ಉದುರಿಸುತ್ತವೆ. | 1 |
| 14. | ಜನಸಾಂದ್ರತೆ ಎಂದರೇನು ? | |
| | ***ಉತ್ತರ :*** | |
| | ಪ್ರತಿ ಚದರ ಕಿಲೋಮೀಟರ್ ಪ್ರದೇಶದಲ್ಲಿ ವಾಸಿಸುವ ಜನರ ಸಂಖ್ಯೆ. | 1 |
| 15. | ಸಾಟಿ ವಿನಿಮಯ ಪದ್ಧತಿ ಎಂದರೇನು ? | |
| | ***ಉತ್ತರ :*** | |
| | ಹಣವನ್ನು ಬಳಸದೆ ಸರಕುಗಳನ್ನು ಸರಕುಗಳಿಗೆ ವಿನಿಮಯ ಮಾಡುವುದಕ್ಕೆ ಸಾಟಿ ವಿನಿಮಯ ಪದ್ಧತಿ ಎನ್ನುವರು. | 1 |
| 16. | ವಿಶ್ವಗ್ರಾಹಕ ಆಂದೋಲನದ ಚರಿತ್ರೆಯಲ್ಲಿ ಮಾರ್ಚ್ 15, 1962 ಏಕೆ ಒಂದು ಮಹತ್ವದ ದಿನವಾಗಿದೆ ? | |
| | ***ಉತ್ತರ :*** | |
| | ಮಾರ್ಚ್ 15, 1962 ರಂದು ಅಮೆರಿಕಾದ ಅಧ್ಯಕ್ಷರಾದ ಜಾನ್ ಎಫ್. ಕೆನಡಿ ಅಲ್ಲಿನ ನಾಗರೀಕರಿಗೆ ನಾಲ್ಕು ಹಕ್ಕುಗಳನ್ನು ನೀಡುವ ವಿಧೇಯಕವನ್ನು ಅಂಗೀಕರಿಸಿದರು. | 1 |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| III. | ***ಎರಡರಿಂದ ನಾಲ್ಕು ವಾಕ್ಯಗಳಲ್ಲಿ ಉತ್ತರಿಸುವುದು :*** $8 \times 2 = 16$ | |
| 17. | ಭಾರತೀಯ ರಾಜ್ಯಗಳನ್ನು ನಿಯಂತ್ರಣದಲ್ಲಿಡಲು ಬ್ರಿಟಿಷರಿಗೆ ಸಹಾಯಕ ಸೈನ್ಯ ಪದ್ಧತಿಯು ಹೇಗೆ ನೆರವಾಯಿತು ?<br>***ಉತ್ತರ :***<br>* ಬ್ರಿಟಿಷ್ ಸೈನ್ಯದ ತುಕಡಿಯನ್ನು ಇರಿಸಿಕೊಳ್ಳಬೇಕು<br>* ಸೇನೆಯ ವೇತನ / ವೆಚ್ಚವನ್ನು ಭರಿಸಬೇಕು<br>* ಬ್ರಿಟಿಷ್ ರೆಸಿಡೆಂಟನ ನೇಮಕ<br>* ಇತರ ಯುರೋಪಿಯನ್ನರನ್ನು ನೇಮಿಸಿಕೊಳ್ಳುವಂತಿಲ್ಲ<br>* ಯುದ್ಧ / ಸಂಧಾನಕ್ಕೆ ಗವರ್ನರ್ ಜನರಲ್‌ನ ಸಮ್ಮತಿ ಬೇಕು<br>(ಯಾವುದಾದರೂ ನಾಲ್ಕು) $4 \times \frac{1}{2}$ | 2 |
| 18. | 1961 ರಲ್ಲಿ ಪೋರ್ಚುಗೀಸರಿಂದ ಗೋವಾವನ್ನು ಹೇಗೆ ಮುಕ್ತಗೊಳಿಸಲಾಯಿತು ?<br>***ಉತ್ತರ :***<br>* ನಿರಂತರ ಚಳುವಳಿ<br>* ಆಫ್ರಿಕಾ, ಯುರೋಪ್‌ನಿಂದ ಪೋರ್ಚುಗೀಸ್ ಸೇನೆಯ ಆಗಮನ<br>* 1955 ರಿಂದ ಸತ್ಯಾಗ್ರಹಿಗಳಿಂದ ವಿಮೋಚನಾ ಹೋರಾಟ<br>* 1961 ರಲ್ಲಿ ಭಾರತ ಸೇನೆಯಿಂದ ಗೋವಾ ವಶ | 2 |
| 19. | ಭಾರತದ ವಿದೇಶಾಂಗ ನೀತಿಯ ಉದ್ದೇಶಗಳೇನು ?<br>***ಅಥವಾ***<br>ವಿಶ್ವ ಸಂಸ್ಥೆಯ ಭದ್ರತಾ ಸಮಿತಿಯ ಕಾರ್ಯಗಳನ್ನು ವಿವರಿಸಿ.<br>***ಉತ್ತರ :***<br>* ರಾಷ್ಟ್ರದ ಭದ್ರತೆ<br>* ಆರ್ಥಿಕ ಸಂವರ್ಧನೆ<br>* ಸಾಂಸ್ಕೃತಿಕ ಮೌಲ್ಯಗಳ ಬಿತ್ತರ<br>* ಮಿತ್ರ ರಾಷ್ಟ್ರಗಳನ್ನು ಹೆಚ್ಚಿಸಿ ವಿರೋಧಿ ರಾಷ್ಟ್ರಗಳ ನಿರ್ಬಂಧ<br>* ವಿಶ್ವಶಾಂತಿ, ಸಹಬಾಳ್ವೆ<br>(ಯಾವುದಾದರೂ ನಾಲ್ಕು) $4 \times \frac{1}{2}$<br>***ಅಥವಾ*** | 2 |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | * ಜಾಗತಿಕ ಸಮಸ್ಯೆಗಳ ಶಾಂತಿಯುತ ಪರಿಹಾರ<br>* ಶಾಂತಿಪಾಲನಾ ಪಡೆ ನಿಯೋಜನೆ<br>* ಅಂತಾರಾಷ್ಟ್ರೀಯ ನ್ಯಾಯಾಲಯದ ನ್ಯಾಯಾಧೀಶರ ನೇಮಕ<br>* ಮಹಾಕಾರ್ಯದರ್ಶಿ ಉಮೇದುವಾರಿಕೆಗೆ ಹೆಸರು ಸೂಚನೆ | 2 |
| 20. | "ಸಾಮಾಜಿಕ ಸ್ಥರವಿನ್ಯಾಸವು ವಿವಿಧ ರೂಪಗಳಲ್ಲಿದೆ." ಹೇಗೆ ?<br>***ಅಥವಾ***<br>1970 ರ ದಶಕದಲ್ಲಿ ಡಿ. ದೇವರಾಜ ಅರಸುರವರು ಕರ್ನಾಟಕದಲ್ಲಿ ಸಾಮಾಜಿಕ ಬದಲಾವಣೆಗಳನ್ನು ಯಾವ ರೀತಿಯಲ್ಲಿ ತಂದರು ?<br>***ಉತ್ತರ :***<br>* ಆದಿವಾಸಿ ಸಮಾಜ<br>* ಗುಲಾಮಗಿರಿ<br>* ಎಸ್ಟೇಟ್ಸ್ ಪದ್ಧತಿ<br>* ವರ್ಣ ವ್ಯವಸ್ಥೆ<br>* ಜಾತಿ ವ್ಯವಸ್ಥೆ (ಯಾವುದಾದರೂ ನಾಲ್ಕು) 4 × ½ | 2 |
| | ***ಅಥವಾ***<br>* ಸಾಮಾಜಿಕ ದುರ್ಬಲರ ವಿಮೋಚನೆಗೆ ಶಾಸನ<br>* ಗೇಣಿದಾರರ ಬಿಡುಗಡೆ<br>* ಜೀತ ಪದ್ಧತಿ<br>* ಬಡವರ ಋಣ ಪರಿಹಾರ<br>* ತಲೆಯ ಮೇಲೆ ಮಲ ಹೊರುವ ರೂಢಿಯ ನಿರ್ಮೂಲನೆ<br>(ಯಾವುದಾದರೂ ನಾಲ್ಕು) 4 × ½ | 2 |
| 21. | ಪೂರ್ವ ಘಟ್ಟ ಮತ್ತು ಪಶ್ಚಿಮ ಘಟ್ಟಗಳನ್ನು ವ್ಯತ್ಯಯಿಸಿ.<br>***ಉತ್ತರ :*** | |

| ***ಪೂರ್ವ ಘಟ್ಟ*** | ***ಪಶ್ಚಿಮ ಘಟ್ಟ*** |
|---|---|
| * ಮಹಾನದಿ ಕಣಿವೆಯಿಂದ ನೀಲಗಿರಿ ಬೆಟ್ಟಗಳವರೆಗೆ | * ತಾಪಿ ನದಿಕಣಿವೆಯಿಂದ ಕನ್ಯಾಕುಮಾರಿ ಭೂಶಿರದವರೆಗೆ |
| * ನಿರಂತರವಾಗಿಲ್ಲ | * ನಿರಂತರ |
| * ಎತ್ತರವಾಗಿಲ್ಲ | * ಎತ್ತರವಾಗಿದೆ |
| * ನದಿಕಣಿವೆಗಳಿಂದ ಪ್ರತ್ಯೇಕಗೊಂಡಿವೆ | * ಪ್ರತ್ಯೇಕಗೊಂಡಿಲ್ಲ |
| | * ಹೆಚ್ಚು ಮಳೆ ಪಡೆಯುತ್ತದೆ |

(ಪ್ರತಿಯೊಂದರಲ್ಲೂ ಯಾವುದಾದರೂ ಎರಡು–ಎರಡು ವ್ಯತ್ಯಾಸಗಳು) 1 + 1 — 2

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 22. | ಮಣ್ಣಿನ ಸವೆತಕ್ಕೆ ಕಾರಣಗಳೇನು ?<br>*ಉತ್ತರ :*<br>* ಅರಣ್ಯ ನಾಶ<br>* ಅತಿ ಮೇಯಿಸುವಿಕೆ<br>* ವರ್ಗಾವಣೆ ಬೇಸಾಯ<br>* ಅವೈಜ್ಞಾನಿಕ ಬೇಸಾಯ<br>* ಮೇಲ್ಪದರದ ಮಣ್ಣನ್ನು ಇಟ್ಟಿಗೆ, ಹೆಂಚುಗಳಿಗೆ ಬಳಸುವುದು<br>* ಪ್ರವಾಹಗಳು<br>* ಭೂಕುಸಿತ (ಯಾವುದಾದರೂ ನಾಲ್ಕು) 4 × ½ | 2 |
| 23. | "ಸ್ವಸಹಾಯ ಸಮೂಹಗಳು ಮಹಿಳೆಯರ ಸ್ವಾಯತ್ತತೆ ಮತ್ತು ಘನತೆಯನ್ನು ಹೆಚ್ಚಿಸಿವೆ." ಹೇಗೆ ?<br>*ಉತ್ತರ :*<br>* ವರಮಾನ ಹೆಚ್ಚಳ<br>* ಸ್ವ–ಉದ್ಯೋಗ ತರಬೇತಿ<br>* ಉಳಿತಾಯ ವೃದ್ಧಿ<br>* ಇಚ್ಛಾನುಸಾರ ಖರ್ಚಿಗೆ ಅವಕಾಶ<br>* ಸಾಲ, ಸಬ್ಸಿಡಿ<br>* ಸರ್ವತೋಮುಖ ಅಭಿವೃದ್ಧಿ (ಯಾವುದಾದರೂ ನಾಲ್ಕು) 4 × ½ | 2 |
| 24. | "ಜಾಗತೀಕರಣದಿಂದ ಗ್ರಾಹಕರಿಗೆ ಅನುಕೂಲವಾಗಿದೆ." ವಿಶ್ಲೇಷಿಸಿ.<br>*ಉತ್ತರ :*<br>* ಸರಕು ಸೇವೆಗಳ ವಿಶಾಲ ಉತ್ಪಾದನೆ<br>* ಪ್ರಪಂಚದಾದ್ಯಂತ ಒಂದೇ ರೀತಿಯ ಸರಕು ಲಭ್ಯತೆ<br>* ಆಯ್ಕೆಯಲ್ಲಿ ವಿಶಾಲತೆ<br>* ಪೈಪೋಟಿಯಿಂದ ಕಡಿಮೆ ಬೆಲೆ<br>* ಗುಣಮಟ್ಟದ ವಸ್ತುಗಳ ಲಭ್ಯತೆ (ಯಾವುದಾದರೂ ನಾಲ್ಕು) 4 × ½ | 2 |
| IV. | **ಆರು ವಾಕ್ಯಗಳಲ್ಲಿ ಉತ್ತರಿಸುವುದು :** 9 × 3 = 27 | |
| 25. | ಬ್ರಿಟಿಷ್ ಶಿಕ್ಷಣದ ಪ್ರಭಾವದಿಂದ ಉಂಟಾದ ಅಭಿರುಚಿ ಮತ್ತು ಆಲೋಚನೆಗಳು ಭಾರತದಲ್ಲಿ ಹೊಸ ತಲೆಮಾರುಗಳ ಸೃಷ್ಟಿಗೆ ಹೇಗೆ ಕಾರಣವಾದವು ?<br>*ಉತ್ತರ :*<br>* ಆಧುನಿಕತೆ, ಜಾತ್ಯಾತೀತತೆ, ಪ್ರಜಾಪ್ರಭುತ್ವ, ವೈಜ್ಞಾನಿಕ ಆಲೋಚನೆ, ರಾಷ್ಟ್ರೀಯವಾದಿ ದೃಷ್ಟಿಕೋನ<br>* ಸ್ಥಳೀಯ ಭಾಷೆ / ಸಾಹಿತ್ಯಕ್ಕೆ ಪ್ರೋತ್ಸಾಹ | 3 |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ∗ ವೃತಪತ್ರಿಕೆಗಳ ಪ್ರಕಟಣೆ<br>∗ ಧಾರ್ಮಿಕ / ಸಾಮಾಜಿಕ ಸುಧಾರಣಾ ಚಳುವಳಿಗಳು<br>∗ ನವೀನ ಆಲೋಚನೆಗಳು<br>∗ ಜಗತ್ತಿನಾದ್ಯಂತದ ಸ್ವಾತಂತ್ರ್ಯ ಚಳುವಳಿಗಳ ಪ್ರಭಾವ<br>∗ ಸಾಂಸ್ಕೃತಿಕ ಪರಂಪರೆಯ ಅರಿವು<br>(ಯಾವುದಾದರೂ ಆರು) $6 \times \frac{1}{2}$ | |
| 26. | ಹಲಗಲಿಯ ಬೇಡರ ದಂಗೆಯನ್ನು ವಿವರಿಸಿ.<br>***ಅಥವಾ***<br>ಆರ್ಯ ಸಮಾಜದ ಉದ್ದೇಶಗಳನ್ನು ವಿವರಿಸಿ.<br>***ಉತ್ತರ :***<br>∗ 1857 ರಲ್ಲಿ ಬ್ರಿಟಿಷರಿಂದ ಶಸ್ತ್ರಗಳ ಬಳಕೆ ನಿರ್ಬಂಧಿಸಿ ಕಾನೂನು<br>∗ ಹಲಗಲಿಗೆ ಅನ್ವಯ<br>∗ ಬಂದೂಕುಗಳನ್ನು ಒಪ್ಪಿಸಲು ನಕಾರ<br>∗ ಪರಂಪರಾಗತ ಹಕ್ಕನ್ನು ಉಳಿಸಲು ಹೋರಾಟ<br>∗ ಮಂಟೂರು, ಬೋದಾನಿ, ಆಲಗುಂಡಿಯ ಬೇಡರ ಸೇರ್ಪಡೆ<br>∗ ಇಂಗ್ಲಿಷ್ ಸೇನೆ ರವಾನೆ<br>∗ ಬ್ರಿಟಿಷರಿಂದ ಬೇಡರ ದಮನ<br>∗ ಬಂಡಾಯಗಾರರನ್ನು ಗಲ್ಲಿಗೇರಿಸಿ ಬಂಡಾಯ ಅಂತ್ಯ<br>(ಯಾವುದಾದರೂ ಆರು) $6 \times \frac{1}{2}$ | 3 |
| | ***ಅಥವಾ***<br>∗ ಎಲ್ಲಾ ಹಿಂದೂಗಳು ರೂಪವಿಲ್ಲದ ಒಬ್ಬನೇ ದೇವರಲ್ಲಿ ನಂಬಿಕೆಯಿಡಬೇಕು<br>∗ ಜಾತಿ ಆಧಾರ ತಿರಸ್ಕಾರ<br>∗ ಅಂತರ್ಜಾತಿ ವಿವಾಹಕ್ಕೆ ಪ್ರೋತ್ಸಾಹ<br>∗ ಬಹುಪತ್ನಿತ್ವ, ಬಾಲ್ಯವಿವಾಹ ತಿರಸ್ಕಾರ<br>∗ ಸ್ತ್ರೀ–ಪುರುಷ ಸಮಾನತೆ<br>∗ ವೇದಗಳು ಮಾತ್ರ ಶ್ರೇಷ್ಠ $6 \times \frac{1}{2}$ | 3 |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 27. | "ಎರಡನೇ ಮಹಾಯುದ್ಧವು ಅತ್ಯಂತ ಬರ್ಬರವಾದುದು." ಹೇಗೆ ? | |
| | *ಉತ್ತರ :* | |
| | ∗ 30 ಕ್ಕಿಂತಲೂ ಹೆಚ್ಚು ದೇಶಗಳು ಭಾಗಿ | |
| | ∗ ಆರ್ಥಿಕ ಮಹಾಕುಸಿತ | |
| | ∗ ಯುರೋಪ್, ಅಮೆರಿಕಾದಲ್ಲಿ ಆರ್ಥಿಕ ಸಂಕಷ್ಟ | |
| | ∗ ಜನರ ಜೀವನಮಟ್ಟ ಕುಸಿತ | |
| | ∗ ಕೈಗಾರಿಕೆ, ಕೃಷಿ ಸ್ಥಗಿತ | |
| | ∗ ನಿರುದ್ಯೋಗ | |
| | ∗ ಲಕ್ಷಾಂತರ ಜನರ ಸಾವು | |
| | ∗ ಅಣುಶಕ್ತಿ ಬಳಕೆ | |
| | ∗ ಹಲವು ನಗರಗಳ ನಾಶ | |
| | (ಯಾವುದಾದರೂ ಆರು) $6 \times \frac{1}{2}$ | 3 |
| 28. | ಭಾರತದ ಆಂತರಿಕ ಸಮಸ್ಯೆಯಾಗಿರುವ ಕೋಮುವಾದದ ನಿವಾರಣೆಗೆ ನಿಮ್ಮ ಸಲಹೆಗಳೇನು ? | |
| | *ಉತ್ತರ :* | |
| | ∗ ಏಕರೂಪದ ನಾಗರಿಕ ಸಂಹಿತೆ | |
| | ∗ ನಾಗರಿಕರಲ್ಲಿ ಸಮಾನತೆ | |
| | ∗ ಜಾತ್ಯಾತೀತ ಮನೋಭಾವ | |
| | ∗ ರಾಷ್ಟ್ರೀಯ ಚಿಂತನೆ | |
| | ∗ ಮತೀಯ ಮೂಲಭೂತವಾದ ನಿವಾರಣೆ | |
| | ∗ ಸಮಾನತೆ, ಸಹೋದರತೆ, ಸಮಗ್ರತೆ | |
| | ∗ ಸಾಂಸ್ಕೃತಿಕ ಬಹುರೂಪತೆಗೆ ಗೌರವ | |
| | ∗ ಜಾತ್ಯಾತೀತ ತತ್ವಕ್ಕೆ ಬದ್ಧತೆ | |
| | (ಯಾವುದಾದರೂ ಆರು) $6 \times \frac{1}{2}$ | 3 |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 29. | ಸಂಘಟಿತ ವಲಯ ಮತ್ತು ಅಸಂಘಟಿತ ವಲಯದ ದುಡಿಮೆಗಾರರನ್ನು ವ್ಯತ್ಯಯಿಸಿ.<br>*ಉತ್ತರ :*<br>***ಸಂಘಟಿತ ವಲಯ ದುಡಿಮೆಗಾರರು*** — ***ಅಸಂಘಟಿತ ವಲಯ ದುಡಿಮೆಗಾರರು***<br>* ಕಾನೂನಿನ ಚೌಕಟ್ಟಿದೆ — * ಕಾನೂನಿನ ಚೌಕಟ್ಟು ಇಲ್ಲ<br>* ನಿಗದಿತ ಕೆಲಸ — * ನಿಗದಿತ ಕೆಲಸ ಇಲ್ಲ<br>* ಉದ್ಯೋಗ ಭರವಸೆ — * ಉದ್ಯೋಗ ಭರವಸೆ ಇಲ್ಲ<br>* ನಿಗದಿತ ವೇತನ ಭತ್ಯೆ — * ನಿಗದಿತ ವೇತನ ಭತ್ಯೆ ಇಲ್ಲ<br>* ರಜೆ ಸೌಲಭ್ಯ — * ರಜೆ ಸೌಲಭ್ಯ ಇಲ್ಲ<br>* ವೈದ್ಯಕೀಯ ಸೌಲಭ್ಯ — * ವೈದ್ಯಕೀಯ ಸೌಲಭ್ಯ ಇಲ್ಲ<br>* ತೆರಿಗೆ ಪಾವತಿದಾರರು — * ತೆರಿಗೆ ಪಾವತಿದಾರರಲ್ಲ<br>(ಪ್ರತಿಯೊಂದರಲ್ಲೂ ಯಾವುದಾದರೂ ಮೂರು–ಮೂರು ವ್ಯತ್ಯಾಸಗಳು) $1\frac{1}{2} + 1\frac{1}{2}$ | 3 |
| 30. | ಸಾರಿಗೆ ಮತ್ತು ಸಂಪರ್ಕ ಮಾಧ್ಯಮಗಳ ಪ್ರಾಮುಖ್ಯತೆ ಏನು ?<br>***ಅಥವಾ***<br>ಕೈಗಾರಿಕೆಗಳ ಸ್ಥಾನೀಕರಣವನ್ನು ನಿರ್ಧರಿಸುವ ಅಂಶಗಳನ್ನು ತಿಳಿಸಿ.<br>*ಉತ್ತರ :*<br>* ಕೈಗಾರಿಕಾ ಪ್ರಗತಿ<br>* ಮಾರುಕಟ್ಟೆ ವಿಸ್ತರಣೆ<br>* ದೇಶೀ / ವಿದೇಶೀ ವ್ಯಾಪಾರ ವೃದ್ಧಿ<br>* ಉದ್ಯೋಗ ಸೃಷ್ಠಿ<br>* ಜನರ ಆದಾಯ / ಜೀವನ ಮಟ್ಟ ಸುಧಾರಣೆ<br>* ಪ್ರವಾಸೋದ್ಯಮ<br>* ರಕ್ಷಣಾ ಪಡೆಗೆ ನೆರವು<br>(ಯಾವುದಾದರೂ ಆರು) $6 \times \frac{1}{2}$ | 3 |
| | ***ಅಥವಾ*** | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | * ಕಚ್ಚಾ ವಸ್ತುಗಳು<br>* ಶಕ್ತಿ ಸಂಪನ್ಮೂಲಗಳು<br>* ಸಾರಿಗೆ, ಸಂಪರ್ಕ<br>* ಮಾರುಕಟ್ಟೆ<br>* ಬಂಡವಾಳ<br>* ಕಾರ್ಮಿಕರು<br>* ನೀರು<br>* ವಾಯುಗುಣ<br>* ಸರ್ಕಾರದ ನೀತಿ<br>(ಯಾವುದಾದರೂ ಆರು) 6 × ½ | 3 |
| 31. | ಭೂಕಂಪದ ಮುನ್ನೆಚ್ಚರಿಕಾ ಕ್ರಮಗಳನ್ನು ಪಟ್ಟಿ ಮಾಡಿ.<br>***ಉತ್ತರ :***<br>* ಜನವಸತಿ ನಿಷೇಧ<br>* ಭೂಕಂಪನಾ ನಿರೋಧಕ ಕಟ್ಟಡಗಳು<br>* ಉತ್ತಮ ದರ್ಜೆಯ ಕಟ್ಟಡ ನಿರ್ಮಾಣ ವಸ್ತುಗಳ ಬಳಕೆ<br>* ಬಹುಮಹಡಿ ಕಟ್ಟಡ ನಿಷೇಧ<br>* ಕೊಳವೆಬಾವಿಗಳ ಆಳಕೊರೆತ ನಿಷೇಧ<br>* ನಗರ ಬೆಳವಣಿಗೆ ನಿರ್ಬಂಧ<br>* ಅಣೆಕಟ್ಟು–ಜಲಾಶಯ ನಿಷೇಧ<br>* ಅರಣ್ಯನಾಶ, ಗಣಿಗಾರಿಕೆ ತಡೆ<br>(ಯಾವುದಾದರೂ ಆರು) 6 × ½ | 3 |
| 32. | ಭಾರತದಲ್ಲಿ ಜಾರಿಯಲ್ಲಿರುವ ಪಂಚಾಯತ್‌ರಾಜ್ ವ್ಯವಸ್ಥೆಯ ಪ್ರಮುಖ ಗುಣಲಕ್ಷಣಗಳು ಯಾವುವು ?<br>***ಅಥವಾ***<br>ಭಾರತೀಯ ರಿಸರ್ವ್ ಬ್ಯಾಂಕ್‌ನ ಕಾರ್ಯಗಳು ಯಾವುವು ?<br>***ಉತ್ತರ :***<br>* ಮೂರು ಹಂತದ ಪಂಚಾಯತಿ ವ್ಯವಸ್ಥೆ<br>* ನೇರ / ನಿಯಮಿತ ಚುನಾವಣೆ<br>* ಮೀಸಲಾತಿ | 3 |


| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ✳ ಹಣಕಾಸು, ಆಡಳಿತ, ಮುಂಗಡಪತ್ರ, ಲೆಕ್ಕಪರಿಶೋಧನೆ ಜವಾಬ್ದಾರಿ<br>✳ ಸಿಬ್ಬಂದಿ ನೀಡಿಕೆ<br>✳ ಪಂಚಾಯತಿ ವಿಸರ್ಜನೆ ಮತ್ತು ಪುನರ್‌ರಚನೆಗೆ ಕಟ್ಟುನಿಟ್ಟಿನ ಕ್ರಮ<br>***ಅಥವಾ***<br>✳ ನೋಟು ಚಲಾವಣೆಯ ಏಕಸ್ವಾಮ್ಯ<br>✳ ಸರ್ಕಾರದ ಬ್ಯಾಂಕು<br>✳ ಬ್ಯಾಂಕುಗಳ ಬ್ಯಾಂಕು<br>✳ ರಾಷ್ಟ್ರೀಯ ಸಂದಾಯ ಕೇಂದ್ರ<br>✳ ಸಾಲ ಪ್ರಮಾಣದ ನಿಯಂತ್ರಕ<br>✳ ವಿದೇಶಿ ವಿನಿಮಯ ಸಂಗ್ರಹದ ಮೇಲ್ವಿಚಾರಕ<br>✳ ಬ್ಯಾಂಕಿಂಗ್ ಹವ್ಯಾಸದ ಅಭಿವೃದ್ಧಿ<br>(ಯಾವುದಾದರೂ ಆರು) $6 \times \frac{1}{2}$ | 3 |
| 33. | ಅಂಚೆ ಕಛೇರಿಗಳು ನೀಡುತ್ತಿರುವ ಹಣಕಾಸಿನ ಸೇವೆಗಳನ್ನು ತಿಳಿಸಿ.<br>***ಅಥವಾ***<br>ಉದ್ಯಮಿಯ ಮುಖ್ಯ ಕಾರ್ಯಗಳನ್ನು ಪಟ್ಟಿ ಮಾಡಿ.<br>***ಉತ್ತರ :***<br>✳ ರಾಷ್ಟ್ರೀಯ ಉಳಿತಾಯ ಪತ್ರ<br>✳ ಅಂಚೆ ಉಳಿತಾಯ ಖಾತೆ<br>✳ ಕಿಸಾನ್ ವಿಕಾಸ ಪತ್ರ<br>✳ ಮಾಹೆಯಾನ ತೀರು ಠೇವಣಿ<br>✳ ಅಂಚೆ ವಿಮೆ<br>✳ ನಿವೃತ್ತಿ ವೇತನ<br>✳ ಹಣದ ವರ್ಗಾವಣೆ<br>✳ ಪೋಸ್ಟಲ್ / ಅಂಚೆ ಬ್ಯಾಂಕ್<br>(ಯಾವುದಾದರೂ ಆರು) $6 \times \frac{1}{2}$ | 3 |
| | ***ಅಥವಾ***<br>✳ ವ್ಯಾಪಾರ ಚಟುವಟಿಕೆಗೆ ಯೋಜನೆ<br>✳ ಉತ್ಪಾದನಾಂಗಗಳ ಸಂಯೋಜನೆ<br>✳ ತಾಂತ್ರಿಕತೆ, ಮಾರುಕಟ್ಟೆ, ಉದ್ಯೋಗಗಳ ಬಗ್ಗೆ ನಿರ್ಧಾರ | 3 |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ∗ ಸಮಂಜಸ ಸಂಯೋಜನೆ | |
| | ∗ ಹೊಸ ವಿಧಾನಗಳು | |
| | ∗ ಆಯವ್ಯಯ ನಿರ್ಧಾರ | |
| | ∗ ಕಷ್ಟ–ನಷ್ಟ ಎದುರಿಸುವುದು | |
| | ∗ ವ್ಯಾಪಾರಕ್ಕೆ ಮಾರ್ಗದರ್ಶನ | |
| | (ಯಾವುದಾದರೂ ಆರು) $6 \times \frac{1}{2}$ | |
| V. | ***ಎಂಟರಿಂದ ಹತ್ತು ವಾಕ್ಯಗಳಲ್ಲಿ ಉತ್ತರಿಸುವುದು :*** $4 \times 4 = 16$ | |
| 34. | 1857 ರ ಪ್ರಥಮ ಸ್ವಾತಂತ್ರ್ಯ ಸಂಗ್ರಾಮವು ವಿಫಲವಾಗಲು ಕಾರಣಗಳನ್ನು ವಿವರಿಸಿ. | |
| | ***ಉತ್ತರ :*** | |
| | ∗ ದಂಗೆ ಇಡೀ ಭಾರತವನ್ನು ವ್ಯಾಪಿಸಲಿಲ್ಲ | |
| | ∗ ರಾಜ / ರಾಣಿಯರ ಸ್ವಹಿತಾಸಕ್ತಿ | |
| | ∗ ಯೋಜಿತವಲ್ಲ | |
| | ∗ ಸೈನಿಕರಲ್ಲಿ ಭಿನ್ನತೆ | |
| | ∗ ಮಾರ್ಗದರ್ಶನದ ಕೊರತೆ | |
| | ∗ ಸಂಘಟನೆಯ ಕೊರತೆ | |
| | ∗ ಯುದ್ಧತಂತ್ರ, ಪರಿಣತಿ, ಶಿಸ್ತಿನ ಕೊರತೆ | |
| | ∗ ನಿಶ್ಚಿತ ಗುರಿ ಇರಲಿಲ್ಲ | |
| | ∗ ದೇಶೀಯ ರಾಜರಿಂದ ಬ್ರಿಟಿಷರಿಗೆ ನಿಷ್ಠೆ | |
| | ∗ ಸಿಪಾಯಿಗಳು ಲೂಟಿ, ದರೋಡೆಯಿಂದ ಜನರ ವಿಶ್ವಾಸ ಕಳೆದುಕೊಂಡರು | |
| | (ಯಾವುದಾದರೂ ಎಂಟು) $8 \times \frac{1}{2}$ | 4 |
| 35. | ಡಾ. ಬಿ.ಆರ್. ಅಂಬೇಡ್ಕರ್‌ರವರ ಸಾಮಾಜಿಕ ಸಮಾನತೆಯ ಕಾಳಜಿಯನ್ನು ಉದಾಹರಣೆಗಳೊಂದಿಗೆ ಸ್ಪಷ್ಟೀಕರಿಸಿ. | |
| | ***ಅಥವಾ*** | |
| | "ತೀವ್ರವಾದಿಗಳು ಭಾರತ ಸ್ವಾತಂತ್ರ್ಯ ಹೋರಾಟಕ್ಕೆ ಮತ್ತಷ್ಟು ತೀವ್ರತೆಯನ್ನು ತಂದುಕೊಟ್ಟರು." ಹೇಗೆ ? | |
| | ***ಉತ್ತರ :*** | |
| | ∗ ಸಾಮಾಜಿಕ ಸಮಾನತೆಯಿಲ್ಲದ ರಾಜಕೀಯ ಸ್ವಾತಂತ್ರ್ಯ ಅರ್ಥಹೀನ | |
| | ∗ ಜಾತಿ ವ್ಯವಸ್ಥೆಯ ವಿನಾಶಕ್ಕೆ ಹೋರಾಟ | |
| | ∗ ಮಹದ್, ಕಾಲಾರಾಂ ಚಳುವಳಿ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | * ದುಂಡು ಮೇಜಿನ ಪರಿಷತ್ತುಗಳಲ್ಲಿ ನಿಮ್ನ ವರ್ಗಗಳ ಬಗ್ಗೆ ಸಲಹೆ<br>* ಅಸ್ಪೃಶ್ಯರಿಗೆ ಪ್ರತ್ಯೇಕ ಮತಕ್ಷೇತ್ರ<br>* ಬಹಿಷ್ಕೃತ ಹಿತಕಾರಣಿ ಸಭಾ<br>* ಸ್ವತಂತ್ರ ಕಾರ್ಮಿಕ ಪಕ್ಷ<br>* ಪ್ರಬುದ್ಧ ಭಾರತ, ಜನತಾ, ಮೂಕನಾಯಕ, ಬಹಿಷ್ಕೃತ ಭಾರತ ಪತ್ರಿಕೆಗಳ ಪ್ರಕಟಣೆ<br>* ಕೃಷಿ ಕಾರ್ಮಿಕರ ಏಳಿಗೆ<br>* ಸಂವಿಧಾನದಲ್ಲಿ ಅಸ್ಪೃಶ್ಯತೆಯ ವಿರುದ್ಧ ಕಾನೂನಿನ ರಕ್ಷಣೆ<br>(ಯಾವುದಾದರೂ ಎಂಟು) 8 × ½<br>***ಅಥವಾ***<br>* ಸ್ವದೇಶಿ ಚಳುವಳಿಯನ್ನು ದೇಶದಾದ್ಯಂತ ಕೊಂಡೊಯ್ದರು<br>* ಸ್ವರಾಜ್ಯ ನನ್ನ ಜನ್ಮಸಿದ್ಧ ಹಕ್ಕು ಅದನ್ನು ಪಡೆದೇ ತೀರುವೆ ಎಂದು ತಿಲಕರ ಘೋಷಣೆ<br>* ಪೂರ್ಣ ಸ್ವರಾಜ್ಯದ ಗುರಿ<br>* ಜನ ಸಾಮಾನ್ಯರನ್ನು ಸಂಘಟಿಸುವುದು<br>* ಧಾರ್ಮಿಕ ಆಚರಣೆಗಳ ಮೂಲಕ ಬ್ರಿಟಿಷ್ ವಿರೋಧಿ ಹೋರಾಟ<br>* ಗಣೇಶ, ಶಿವಾಜಿ, ದುರ್ಗಾ ಉತ್ಸವ ಆಚರಣೆ<br>* ತಿಲಕರ ಕೇಸರಿ, ಮರಾಠ ಪತ್ರಿಕೆಗಳು<br>* ಜನಸಾಮಾನ್ಯರಲ್ಲಿ ಹೋರಾಟಕ್ಕೆ ಪ್ರೇರಣೆ<br>* ಕ್ರಾಂತಿಕಾರಕ ಬರವಣಿಗೆಗಳು<br>* ತಿಲಕರ ಗೀತಾರಹಸ್ಯ ಗ್ರಂಥ ಪ್ರಕಟಣೆ<br>* ಲಾಲ್, ಬಾಲ್, ಪಾಲ್, ಅರಬಿಂದೊ ಘೋಷ್ ಪ್ರಮುಖ ನಾಯಕರು<br>* ಹೋರಾಟವನ್ನು ಜನಸಾಮಾನ್ಯರ ಮನೆಮನೆಗೆ ಕೊಂಡೊಯ್ದರು<br>* ಬ್ರಿಟಿಷರನ್ನು ಖಂಡಿಸಿದರು ಮತ್ತು ಅವರ ತತ್ವಗಳಿಗೆ ವಿರೋಧ ವ್ಯಕ್ತಪಡಿಸಿದರು<br>(ಯಾವುದಾದರೂ ಎಂಟು) 8 × ½ | 4 |
| 36. | ಸಿಂಧೂ ಬಯಲಿನ ನಾಗರೀಕತೆಯಿಂದ ಪ್ರಾರಂಭಿಸಿ ಇತ್ತೀಚಿನವರೆಗಿನ ಭಾರತ ಮತ್ತು ಚೀನಾಗಳ ಸಂಬಂಧವನ್ನು ವಿವರಿಸಿ.<br>***ಉತ್ತರ :***<br>* ಸಿಂಧೂ ಮತ್ತು ಮೆಸಪಟೋಮಿಯ ನಾಗರೀಕತೆಯೊಂದಿಗೆ ಗುರುತಿಸಲಾಗಿದೆ<br>* ಬೌದ್ಧ ಧರ್ಮ ಪ್ರಸಾರ | 4 |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | * ರಾಜವಂಶಗಳ ವ್ಯಾಪಾರ ಸಂಬಂಧ<br>* ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ಚೀನಾದ ರೇಷ್ಮೆಯ ಉಲ್ಲೇಖ<br>* ಪಂಚಶೀಲ ತತ್ವಗಳು<br>* ಟಿಬೆಟ್ ವಿವಾದ<br>* 1962 ರ ಇಂಡೋ–ಚೀನಾ ಯುದ್ಧ<br>* ಗಡಿ ವಿವಾದ<br>* ಅರುಣಾಚಲ ಪ್ರದೇಶ ವಿವಾದ<br>* ಬ್ರಿಕ್ಸ್ ( BRICS ) ಉದಯ<br>(ಯಾವುದಾದರೂ ಎಂಟು) 8 × ½ | |
| 37. | ನಮ್ಮ ದೇಶದ ಆರ್ಥಿಕ ಅಭಿವೃದ್ಧಿಯಲ್ಲಿ ಕೃಷಿಯ ಪ್ರಾಮುಖ್ಯತೆ ಏನು ?<br>***ಉತ್ತರ :***<br>* ಪ್ರಾಚೀನ ವೃತ್ತಿ<br>* 65% ಜನರಿಂದ ಕೃಷಿಯ ಅವಲಂಬನೆ<br>* ದೇಶದ ಆರ್ಥಿಕ ಅಭಿವೃದ್ಧಿ<br>* ಜೀವನಾಧಾರ<br>* ಜನ / ಜಾನುವಾರುಗಳಿಗೆ ಆಹಾರ<br>* ತೃತೀಯ ವೃತ್ತಿಗಳಿಗೆ ನೆರವು<br>* ಕೈಗಾರಿಕಾ ಪ್ರಗತಿ<br>* ರಾಜಕೀಯ, ಸಾಮಾಜಿಕ ಪರಿಸ್ಥಿತಿಯ ಮೇಲೆ ಪ್ರಭಾವ<br>(ಯಾವುದಾದರೂ ಎಂಟು) 8 × ½ | 4 |
| VI. 38. | **ಭಾರತದ ನಕ್ಷೆಯನ್ನು ಬರೆದು, ಅದರಲ್ಲಿ ಈ ಕೆಳಗಿನವುಗಳನ್ನು ಗುರುತಿಸಿ :**<br>a) $23\frac{1}{2}^{o}$ ಉತ್ತರ ಅಕ್ಷಾಂಶ<br>b) ಗೋವಿಂದ ಸಾಗರ<br>c) ಮುಂಬೈ ಹೈ<br>d) ತೂತುಕುಡಿ | 1+4=5 |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|




***ದೃಷ್ಟಿ ವಿಕಲಚೇತನ ವಿದ್ಯಾರ್ಥಿಗಳಿಗೆ ಪರ್ಯಾಯ ಪ್ರಶ್ನೆ : (ಪ್ರಶ್ನೆ ಸಂಖ್ಯೆ 38 ರ ಬದಲಿಗೆ)***

ವಿವಿಧೋದ್ದೇಶ ನದಿ ಕಣಿವೆ ಯೋಜನೆಗಳ ಪ್ರಮುಖ ಉದ್ದೇಶಗಳೇನು ?

* ನೀರಾವರಿ ಪೂರೈಕೆ
* ಪ್ರವಾಹಗಳ ನಿಯಂತ್ರಣ
* ಜಲವಿದ್ಯುತ್ ತಯಾರಿಕೆ
* ಮಣ್ಣಿನ ಸವೆತ ನಿಯಂತ್ರಣ
* ಒಳನಾಡಿನ ನೌಕಾಯಾನ
* ಮೀನುಗಾರಿಕೆ
* ಮನರಂಜನೆ ಸೌಲಭ್ಯ
* ಗೃಹ ಬಳಕೆ, ಕೈಗಾರಿಕೆಗೆ ನೀರು ಪೂರೈಕೆ
* ನಿರುಪಯುಕ್ತ ಭೂಮಿಯನ್ನು ಕೃಷಿಗಾಗಿ ಪರಿವರ್ತನೆ
* ಅರಣ್ಯ ಪೋಷಣೆ

5